

## ವೈವಿಧ್ಯಮಯ ಭೂಮಿ

ಅಕ್ಷಯ್ ಕುಮಾರ್ ಜತೆಗೆ 'ಟಾಯ್ಲೆಟ್: ಏಕ್ ಪ್ರೇಮ್ ಕಥಾ'ದಲ್ಲಿ ನಟಿಸಿರುವ ಭೂಮಿ ಪೆಡ್ನೇಕರ್, ಪ್ರೇಕ್ಷಕರ ಮುಕ್ತಕಂಠದ ಶ್ಲಾಘನೆ ಪಡೆದಿದ್ದಾಳೆ. ಸಿನಿಮಾ ಸರ್ಕಾರಿ ಜಾಹೀರಾತಿನಂತೆ ಕೊನೆಗೊಂಡರೂ ಸಹಜ ಸುಂದರಿ ಭೂಮಿ, ಅಷ್ಟೇ ಸಹಜವಾಗಿ ನಟಿಸಿರುವುದು ಚಿತ್ರದ ಪ್ಲಸ್ ಪಾಯಿಂಟ್.

ಈಗ ಭೂಮಿ ಮತ್ತೆ ತನ್ನ ಹಳೆಯ ಹೀರೊ ಆಯುಷ್ಮಾನ್ ಖುರಾನಾ ಜತೆಗೂಡಿದ್ದಾಳೆ. ಇಬ್ಬರೂ 2015ರಲ್ಲಿ ಜೊತೆಗೆ ನಟಿಸಿದ್ದ 'ಧಮ್ ಲಗಾಕೆ ಹೈಸಾ' ಚಿತ್ರ ಸಾಕಷ್ಟು ಸುದ್ದಿ ಮಾಡಿತ್ತು. ಆ ವರ್ಷ ಎರಡು ಫಿಲಂಫೇರ್ ಪ್ರಶಸ್ತಿಗಳನ್ನೂ ಗೆದ್ದುಕೊಂಡಿದ್ದ ಆ ಚಿತ್ರ ಭೂಮಿಗೆ 'ವರ್ಷದ ಅತ್ಯುತ್ತಮ ಹೊಸ ಮುಖ' ಪ್ರಶಸ್ತಿಯನ್ನೂ ತಂದುಕೊಟ್ಟಿತ್ತು. ಅದೇ ಆಯುಷ್ಮಾನ್ ಜತೆಗೆ ಭೂಮಿ ಈಗ ನಟಿಸಿರುವ 'ಶುಭಮಂಗಲ್ ಸಾವಧಾನ್' ಸೆಪ್ಟೆಂಬರ್ ಮೊದಲ ವಾರದಲ್ಲಿ ಬಿಡುಗಡೆಗೆ ಸಿದ್ಧವಾಗಿದೆ. ತಮಿಳಿನ ಯಶಸ್ವಿ ಹಾಸ್ಯಚಿತ್ರ 'ಕಲ್ಯಾಣ ಸಮಯಲ್ ಸಾಧಂ' ನ ರಿಮೇಕ್ ಆಗಿರುವ 'ಶುಭಮಂಗಲ್..' ಮೂಲಕ ಭೂಮಿಯೂ ಪ್ರೇಕ್ಷಕರನ್ನು ನಗಿಸಲು ಹೊರಟಿದ್ದಾಳೆ. ಬಾಲಿವುಡ್‌ನಲ್ಲಿ ವೈವಿಧ್ಯಮಯ ಪಾತ್ರಗಳು ಸಿಗುತ್ತಿರುವುದು ಭೂಮಿಯ ಅದೃಷ್ಟ ಎಂದೇ ಹೇಳಬೇಕು.



## ಇಷಾ: ಅಂತರ್ಜಾಲದ ನಶಾ

ಸದ್ಯಕ್ಕೆ ಇನ್‌ಸ್ಟಾಗ್ರಾಮ್‌ನಲ್ಲಿ ಒಂದೇ ಸಮನೆ ಹಾಟ್ ಫೋಟೋಗಳನ್ನು ಹಾಕುವ ಮೂಲಕ ಸುದ್ದಿ ಮಾಡುತ್ತಿರುವ ಇಷಾ ಗುಪ್ತಾ, ಒಂದು ಕಾಲದಲ್ಲಿ ಪತ್ರಕರ್ತೆ ಆಗಬೇಕೆಂದು ಹೊರಟವಳು. ಕರ್ನಾಟಕದಲ್ಲೇ ಪ್ರತಿಷ್ಠಿತ ಕಾಲೇಜಿನಲ್ಲಿ ಜರ್ನಲಿಸಂ ಕೋರ್ಸ್ ಮುಗಿಸಿ ನ್ಯೂಕಾಸಲ್ ವಿಶ್ವವಿದ್ಯಾಲಯದಲ್ಲಿ ಕಾನೂನು ಅಧ್ಯಯನಕ್ಕೆ ಸ್ಕಾಲರ್‌ಶಿಪ್ ಪಡೆದವಳು. ಆದರೆ ಅವೆಲ್ಲ ಬದಿಗಿಟ್ಟು ಹಾಲಿವುಡ್‌ಗೆ ನುಗ್ಗಿದ್ದೇ ಕಥೆ ಬದಲಾಯಿತು.

2007ರಲ್ಲಿ ಫೆಮಿನಾ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ 'ಮಿಸ್ ಫೋಟೋಜೆನಿಕ್' ಪ್ರಶಸ್ತಿ ಗೆದ್ದ ಇಷಾ, 'ಮಿಸ್ ಇಂಟರ್‌ನ್ಯಾಷನಲ್' ಕೂಡಾ ಆದವಳು. ಸಹಜವಾಗಿಯೇ ಕಿಂಗ್‌ಫಿಶರ್ ಕ್ಯಾಲೆಂಡರ್‌ನಲ್ಲಿ ಕಾಣಿಸಿಕೊಂಡದ್ದು ಈಕೆಗೆ ಸೆಕ್ಸೀ ಇಮೇಜ್ ನೀಡಿತು.

ದೆಹಲಿ ಸಂಜಾತೆ ಇಷಾ ಗುಪ್ತಾ, ಇದೀಗ ಅಜಯ್ ದೇವಗನ್ ಜತೆ ನಟಿಸಿರುವ ಹೊಸ ಚಿತ್ರ 'ಬಾದ್‌ಶಾಹೊ' ಇನ್ನೆರಡು ವಾರಗಳಲ್ಲಿ ತೆರೆಗೆ ಬರಲಿದೆ. ಇಮ್ರಾನ್ ಹಷ್ಮಿ ಕೂಡಾ ನಟಿಸಿರುವ ಈ ಚಿತ್ರ ಇಶಾಗೆ ಇನ್ನಷ್ಟು ಅವಕಾಶಗಳನ್ನು ಒದಗಿಸುವುದೋ ಕಾದು ನೋಡಬೇಕು. ಸದ್ಯಕ್ಕಂತೂ ಬಾಲಿವುಡ್‌ನಲ್ಲಿ ಇತರ ನಟಿಯರ ಜತೆಗೆ ಸ್ಪರ್ಧೆಯಲ್ಲಿ ಹಿಂದೆ ಬಿದ್ದು ದೇಹ ಪ್ರದರ್ಶನಕ್ಕೇ ಒತ್ತು ಕೊಟ್ಟಂತೆ ಕಾಣಿಸುತ್ತಿರುವ ಇಶಾ, ಹೊಸ ಚಿತ್ರದಲ್ಲಿ ನಟನೆಗೆ ಒಳ್ಳೆಯ ಅವಕಾಶಗಳನ್ನೇ ಪಡೆದುಕೊಂಡಿದ್ದಾಳೆ.

ಹಾಗೆ ನೋಡಿದರೆ, ದೇಹಸಿರಿಯ ಪ್ರದರ್ಶನದಲ್ಲೇ ಹೆಚ್ಚು ಸುದ್ದಿ ಮಾಡುತ್ತಿರುವ ಇಷಾ, ಒಳ್ಳೆಯ ನಟಿಯೂ ಹೌದು ಎನ್ನುವುದನ್ನು ಸಾಬೀತು ಮಾಡಿದ್ದು 'ರುಸ್ತುಂ' ಎನ್ನುವ ಚಿತ್ರ. 'ಜನ್ನತ್–2' ಚಿತ್ರದ ಮೂಲಕ ಇಶಾ ಬಾಲಿವುಡ್‌ಗೆ ಎಂಟ್ರಿ ಪಡೆದಾಗ ಎಲ್ಲರೂ ಇನ್ನೊಂದು ಸೆಕ್ಸ್‌ಬಾಂಬ್ ಎಂದೇ ಬ್ರ್ಯಾಂಡ್ ಮಾಡಿದ್ದರು. ಹಮ್‌ಶಕಲ್ಸ್, ರಾಝ್ 3ಡಿ ಚಿತ್ರಗಳೂ ಈ ಇಮೇಜನ್ನು ಬದಲಿಸಲಿಲ್ಲ. ಆದರೆ 'ರುಸ್ತುಂ' ಚಿತ್ರ ವಿಮರ್ಶಕರ ಮನ ಗೆದ್ದರೂ ಮತ್ತೆ ಅಂತಹ ಅವಕಾಶಗಳು ಹುಡುಕಿಕೊಂಡು ಬರಲಿಲ್ಲ. ಹಾಗೆಂದೇ ಚಾಲ್ತಿಯಲ್ಲಿರಲು ಈಕೆ ಇನ್ಸ್‌ಸ್ಟಾಗ್ರಾಂ ಸರ್ಕಸ್‌ಗಳ ಮೊರೆ ಹೋಗಿರುವಂತಿದೆ. ಇಷಾಳನ್ನು ಈಗ 'ಅಂತರ್ಜಾಲದ ನಶಾ' ಎಂದೇ ಕರೆಯಲಾಗುತ್ತಿದೆ.

■ ಬಿಂದು